# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.312-2017** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶಿವಣ್ಣನಾಯಕ<br>ಸುತ್ತೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 19-01-2023. |

**<u>ಪಾಟೀ ಸವಾಲುಃ ಶ್ರೀ ಸಿ.ಎಲ್.ಬಿ ವಕೀಲರಿಂದಃ</u>**

ಕಲ್ಬಂಡನಾಯಕ ಎಂದರೆ ನನ್ನ ತಾತ. ದಾವಾ ಸ್ವತ್ತುಗಳೆಲ್ಲವೂ ಮೂಲತಃ ನನ್ನ ತಾತನವರಾದ ಕಲ್ಬಂಡನಾಯಕ ರವರಿಗೆ ಸೇರಿದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿ. ಕಲ್ಬಂಡನಾಯಕನಿಗೆ 4 ಜನ ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5 ಜನ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಆವರುಗಳೆಂದರೆ ಮಾದನಾಯಕ, ಚಿಕ್ಕಹೊನ್ನನಾಯಕ, ಪಿಣ್ಣನಾಯಕ, ದೊಳ್ಳನಾಯಕ ಮತ್ತು 5 ನೇಯವರಾದ ನನ್ನ ತಂದೆ ಪುಟ್ಟನಾಯಕ ರವರುಗಳಾಗಿರುತ್ತಾರೆ.

ನಾನು ಮತ್ತು ಪ್ರತಿವಾದಿ 1 ರಿಂದ 3 ರವರು ದಾವಾ ಸ್ವತ್ತುಗಳನ್ನು ದಿ.29-07-1987 ರಂದು ಪಂಚಾಯ್ತಿ ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ಸಮಯ ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳು ವಿಭಾಗ ಆಗಿದ್ದವು ಎಂದರೆ ಸರಿ. ವಿಭಾಗದ ಲಾಗಾಯ್ತಿನಿಂದ ನಮ್ಮ- ನಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ನಾವುಗಳು ಪ್ರತ್ಯೇಕ ಪ್ರತ್ಯೇಕವಾಗಿ ಸ್ವಾಧೀನ ಹೊಂದಿ ಅನುಭವಿಸುತ್ತಿರುತ್ತೇವೆ ಎಂದರೆ ಸರಿ. ಸದರಿ ವಿಭಾಗದ ಪ್ರಕಾರ ದಾವಾ 1 ನೇ ಐಟಂ ಸ್ವತ್ತು ನನ್ನ ಮತ್ತು 1 ರಿಂದ 3 ನೇ ಪ್ರತಿವಾದಿಗಳ ನಡುವೆ ಸಮಾನವಾಗಿ ವಿಭಾಗವಾಗಿತ್ತು ಎಂದರೆ ಸರಿ. ಸದರಿ ಜಮೀನನ್ನು ಜಿಮಾರಹಳ್ಳಿ ಹೊಸಗದ್ದೆ ಎಂದು ಕರೆಯುತ್ತಾರೆ ಎಂದರೆ ಸರಿ. ದಾವಾ 1 ನೇ ಐಟಂ ವಿಸ್ತೀರ್ಣ 0.10 ಗುಂಟೆ ಇದ್ದು, ಸದರಿ 0.10 ಗುಂಟೆ ಪೈಕಿ ನನಗೆ ಮತ್ತು 1 ರಿಂದ 3 ಪ್ರತಿವಾದಿಗಳಿಗೆ ತಲಾ ಎರಡುವರೆ ಗುಂಟೆ ಜಮೀನು ಬಂದಿತ್ತು ಎಂದರೆ ಸರಿ. ವಿಭಾಗದಂತೆ ದಾವಾ 1 ನೇ ಐಟಂ ಸ್ವತ್ತಿನ ವಿಸ್ತೀರ್ಣ 0.10 ಗುಂಟೆ ಪೈಕಿ ಪೂರ್ವದ ಎರಡುವರೆ ಗುಂಟೆ ಸ್ವತ್ತು 1 ನೇ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿ. 1 ನೇ ಪ್ರತಿವಾದಿಯ ಭಾಗಕ್ಕೆ ಬಂದ ಸ್ವತ್ತಿನ ಪಶ್ಚಿಮಕ್ಕೆ 2 ನೇ ಪ್ರತಿವಾದಿಗೆ ಎರಡುವರೆ ಗುಂಟೆ ಜಮೀನು ಬಂದಿತ್ತು ಎಂದರೆ ಸರಿ, 2 ನೇ ಪ್ರತಿವಾದಿಗೆ ಭಾಗಕ್ಕೆ

ಬಂದ ಸ್ವತ್ತಿನ ಪಶ್ಚಿಮಕ್ಕೆ 3 ನೇ ಪ್ರತಿವಾದಿಗೆ ಎರಡುವರೆ ಗುಂಟೆ ಸ್ವತ್ತು ಬಂದಿತ್ತು ಎಂದರೆ ಸರಿ. 3 ನೇ ಪ್ರತಿವಾದಿಯ ಭಾಗಕ್ಕೆ ಬಂದ ಸ್ವತ್ತಿನ ಪಶ್ಚಿಮಕ್ಕೆ ನನಗೆ ಎರಡುವರೆ ಗುಂಟೆ ಸ್ವತ್ತು ಬಂದಿತ್ತು ಎಂದರೆ ಸರಿ. ಸದರಿ ವಿಭಾಗದಂತೆ ನಾವು ವ್ಯವಸಾಯ ಮಾಡಿಕೊಂಡು ಅನುಭವಿಸುತ್ತಿರುತ್ತೇವೆ ಎಂದರೆ ಸರಿ.

3. ದಾವಾ 2 ನೇ ಐಟಂ ಸ್ವತ್ತಿನ ವಿಸ್ತೀರ್ಣ 0.11 ಗುಂಟೆ ಇದ್ದು, ಸದರಿ ಸ್ವತ್ತು ಸಹ ತಲಾ ಎರಡುಮುಕ್ಕಾಲು ಗುಂಟೆಯಂತೆ ನನ್ನ ಹಾಗೂ 1 ರಿಂದ 3 ನೇ ಪ್ರತಿವಾಳಿಗಳ ನಡುವೆ ವಿಭಾಗ ಆಗಿತ್ತು ಎಂದರೆ ಸರಿ. ವಿಭಾಗದಂತೆ ದಾವಾ 2 ನೇ ಐಟಂ ಸ್ವತ್ತಿನ ವಿಸ್ತೀರ್ಣ 0.11 ಗುಂಟೆ ಪೈಕಿ ಪೂರ್ವದ ಎರಡುಮುಕ್ಕಾಲು ಗುಂಟೆ ಸ್ವತ್ತು 1 ನೇ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿ. 1 ನೇ ಪ್ರತಿವಾದಿಯ ಭಾಗಕ್ಕೆ ಬಂದ ಸ್ವತ್ತಿನ ಪಶ್ಚಿಮಕ್ಕೆ 2 ನೇ ಪ್ರತಿವಾದಿಗೆ ಎರಡುಮುಕ್ಕಾಲು ಗುಂಟೆ ಜಮೀನು ಬಂದಿತ್ತು ಎಂದರೆ ಸರಿ, 2 ನೇ ಪ್ರತಿವಾದಿ ಭಾಗಕ್ಕೆ ಬಂದ ಸ್ವತ್ತಿನ ಪಶ್ಚಿಮಕ್ಕೆ 3 ನೇ ಪ್ರತಿವಾದಿಗೆ ಎರಡುಮುಕ್ಕಾಲು ಗುಂಟೆ ಸ್ವತ್ತು ಬಂದಿತ್ತು ಎಂದರೆ ಸರಿ. 3 ನೇ ಪ್ರತಿವಾದಿಯ ಭಾಗಕ್ಕೆ ಬಂದ ಸ್ವತ್ತಿನ ಪಶ್ಚಿಮಕ್ಕೆ ನನಗೆ ಎರಡುಮುಕ್ಕಾಲು ಗುಂಟೆ ಸ್ವತ್ತು ಬಂದಿತ್ತು ಎಂದರೆ ಸರಿ. ಸದರಿ ವಿಭಾಗದಂತೆ ನಾವು ವ್ಯವಸಾಯ ಮಾಡಿಕೊಂಡು ಅನುಭವಿಸುತ್ತಿರುತ್ತೇವೆ ಎಂದರೆ ಸರಿ.

4. ದಾವಾ 3 ನೇ ಐಟಂ ಸ್ವತ್ತಿನ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಮನೆಯು ಸಹ ನನ್ನ ಮತ್ತು 1 ರಿಂದ 3 ನೇ ಪ್ರತಿವಾದಿಗಳ ನಡುವೆ ಭಾಗವಾಗಿರುತ್ತದೆ ಎಂದರೆ ಸರಿ. ವಿಭಾಗದಂತೆ ಮನೆಯ ಒಟ್ಟು ವಿಸ್ತೀರ್ಣ ಪೈಕಿ 1 ನೇ ಪ್ರತಿವಾದಿಗೆ 10X17 ಅಡಿ ಸ್ವತ್ತು ಬಂದಿತ್ತು ಎಂದರೆ ಸರಿ. 1 ನೇ ಪ್ರತಿವಾದಿಯ ಭಾಗಕ್ಕೆ ಬಂದ ಸ್ವತ್ತಿನ ದಕ್ಷಿಣಕ್ಕೆ 2 ನೇ ಪ್ರತಿವಾದಿಗೆ 10x17 1/2 ಅಡಿ ಸ್ವತ್ತು ಬಂದಿತ್ತು ಎಂದರೆ ಸರಿ. 2 ನೇ ಪ್ರತಿವಾದಿ ಭಾಗಕ್ಕೆ ಬಂದ ಸ್ವತ್ತಿನ ದಕ್ಷಿಣಕ್ಕೆ 3 ನೇ ಪ್ರತಿವಾದಿಗೆ 10X17 1/2 ಅಡಿ ಸ್ವತ್ತು ಬಂದಿತ್ತು ಎಂದರೆ ಸರಿ. 2 ನೇ ಪ್ರತಿವಾದಿ ಭಾಗಕ್ಕೆ ಬಂದ ಸ್ವತ್ತಿನ ಪಶ್ಚಿಮಕ್ಕೆ ನನ್ನ ಭಾಗಕ್ಕೆ ಸ್ವತ್ತು ಬಂದಿತ್ತು ಎಂದರೆ ಸರಿ. ನನ್ನ ಭಾಗಕ್ಕೆ ಬಂದ ಸ್ವತ್ತಿನ ವಿಸ್ತೀರ್ಣ ಪೂ-ಪ-25 ಅಡಿ, ಉ-ದ.12 ಅಡಿ ಎಂದರೆ ಸರಿ. ನಾನು ಮತ್ತು 1 ರಿಂದ 3 ನೇ ಪ್ರತಿವಾದಿಗಳು ನಮ್ಮ-ನಮ್ಮ ಭಾಗಕ್ಕೆ ಬಂದ ಸ್ವತ್ತಿನಲ್ಲಿ ನಮ್ಮ-ನಮ್ಮ ಕುಟುಂಬದವರೊಂದಿಗೆ ವಾಸಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ.

5. 2 ನೇ ಪ್ರತಿವಾದಿ ತನ್ನ ಭಾಗಕ್ಕೆ ಬಂದ ಮನೆ ಸ್ವತ್ತಿನಲ್ಲಿ ಸ್ವಲ್ಪ ಭಾಗವನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯು ತನ್ನ ಭಾಗಕ್ಕೆ ಬಂದಿ ಸ್ವತ್ತಿನಲ್ಲಿ 1 ನೇ ಪ್ರತಿವಾದಿಗೆ ಮಾರಾಟ ಮಾಡಿ ಉಳಿದ ಸ್ವತ್ತನ್ನು ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಭಾಗಕ್ಕೆ ಬಂದ ಹಾಗೂ 2 ನೇ ಪ್ರತಿವಾದಿಯಿಂದ ಕ್ರಯಕ್ಕೆ ಪಡೆದ ಸ್ವತ್ತಿನ್ನು

ಸೇರಿಸಿ ಗೋಡೆ ಹಾಕಿಕೊಂಡು ಪ್ರತ್ಯೇಕವಾಗಿ ವಾಸವಿರುತ್ತಾರೆ ಎಂದರೆ ಸರಿ. ಅದೇ ರೀತಿ ನಾನು ಸಹ ನನ್ನ ಭಾಗಕ್ಕೆ ಬಂದ ಸ್ವತ್ತು ಮತ್ತು 2 ನೇ ಪ್ರತಿವಾದಿಯಿಂದ ಖರೀದಿ ಮಾಡಿದ ಸ್ವತ್ತನ್ನು ಸೇರಿಸಿ ಗೋಡೆ ಹಾಕಿಕೊಂಡು ಪ್ರತ್ಯೇಕವಾಗಿ ವಾಸವಿರುತ್ತೇನೆ ಎಂದರೆ ಸರಿ. 3 ನೇ ಪ್ರತಿವಾದಿ ತನ್ನ ಭಾಗಕ್ಕೆ ಮನೆಯಲ್ಲಿ ಅವರ ಕುಟುಂಬದವರೊಂದಿಗೆ ಪ್ರತ್ಯೇಕವಾಗಿ ವಾಸವಿರುತ್ತಾವರೆ ಎಂದರೆ ಸರಿ. ನಾನು ಮತ್ತು 1 ಮತ್ತ 3 ನೇ ಪ್ರತಿವಾದಿ ವಾಸವಿರುವ ಮನೆಗೆ ಪ್ರತ್ಯೇಕ ಬಾಗಿಲುಗಳು ಇರುತ್ತವೆ ಎಂದರೆ ಸರಿ. ನಾವು ಪ್ರತ್ಯೇಕ ಬಾಗಿಲುಗಳಲ್ಲಿ ಓಡಾಡಿಕೊಂಡು ನಮ್ಮ ಕುಟುಂಬದವರೊಂದಿಗೆ ವಾಸವಿರುತ್ತೇವೆ ಎಂದರೆ ಸರಿ. ದಿ.29-07-1987 ರಲ್ಲಿ ಆದ ವಿಭಾಗವೇ ಅಂತಿಮವಾಗಿರುತ್ತದೆ ಎಂದರೆ ಸರಿ. ಸದರಿ ವಿಭಾಗಕ್ಕೆ ನಾನು ಮತ್ತು 1 ರಿಂದ 3 ನೇ ಪ್ರತಿವಾದಿಗಳು ಬದ್ಧರಾಗಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಮರಣ ಹೊಂದಿದ ಸಮಯ 1 ರಿಂದ 3 ನೇ ಪ್ರತಿವಾದಿಗಳು ನನ್ನ ತಂದೆಯವರ ಉತ್ತರಾಧಿಕ್ರಿಯೆಯ ವೆಚ್ಚವನ್ನು ಭರಿಸದೇ ಇದ್ದ ಕಾರಣ ಎಲ್ಲಾ ವೆಚ್ಚವನ್ನು ನಾನೇ ಭರಿಸಿರುತ್ತೇನೆ ಹಾಗೂ ಸರ್ವೆ ನಂ.180/4 ರಲ್ಲಿ 1 ಮತ್ತು 3 ನೇ ಪ್ರತಿವಾದಿ ಭಾಗಕ್ಕೆ ಬಂದ ತಲಾ ಎರಡುವರೆ ಗುಂಟೆ ಸ್ವತ್ತನ್ನು ನಾನು ಹಣ ಕೊಟ್ಟು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. 1 ಮತ್ತು 3 ನೇ ಪ್ರತಿವಾದಿಗಳು ನನ್ನಿಂದ ಹಣ ಪಡೆದು ಅವರು ಮತ್ತು ಅವರ ಮಕ್ಕಳು ಪಾಲು ಪಟ್ಟಿ ಮೇಲೆ ಸಹಿ ಮಾಡಿಕೊಟ್ಟಿರುತ್ತಾರೆ. ನಾನು ಹೇಳುವಂತೆ ನನ್ನ ತಂದೆಯವರ ಉತ್ತರಾಧಿಕ್ರಿಯೆಯ ಎಲ್ಲಾ ವೆಚ್ಚವನ್ನು ನಾನೇ ಭರಿಸಿರುವುದಿಲ್ಲ ಹಾಗೂ 1 ಮತ್ತು 3 ನೇ ಪ್ರತಿವಾದಿಗಳು ನನ್ನಿಂದ ಹಣ ಪಡೆದು ಅವರ ಭಾಗಕ್ಕೆ ಬಂದ ಸ್ವತ್ತನ್ನು ಬಿಟ್ಟುಕೊಟ್ಟಿರುವುದಿಲ್ಲ ಹಾಗೂ ನಾನು ಹೇಳಿದಂತೆ ಪಂಚಾಯ್ತಿ ಪಾರಿಕತ್ತಿಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಂಚಾಯ್ತಿ ಪಾರಿಕತ್ತನ್ನು ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸಲ್ಲಿಸುವ ವೇಳೆಗೆ ನಮ್ಮೂರಿನಲ್ಲಿ ಸ್ವತ್ತಿನ ಮೌಲ್ಯವು 2 ರಿಂದ 3 ಸಾವಿರ ಇತ್ತು. ಸ್ವತ್ತಿನ ಮೌಲ್ಯ 2 ರಿಂದ 3 ಸಾವಿರ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**